# ನಿವೇದಿತಾ ವಿದ್ಯಾಲಯ ಹಾಗೂ ಭಗಿನಿ ಸುಧೀರಾ - ೨

❑ ಪ್ರವ್ರಾಜಿಕಾ ಪರಮಪ್ರಾಣಾ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಸಂನ್ಯಾಸ ಜೀವನದ ಆಕರ್ಷಣೆ ಸುಧೀರಾರಲ್ಲಿ ತೀವ್ರವಾಯಿತು. ಮಹಿಳೆಯರಿಗಾಗಿ ಒಂದು ಸಂನ್ಯಾಸೀ ಮಠವನ್ನು ತೆರೆಯುವ ಸ್ವಾಮೀಜಿಯ ಕನಸನ್ನು ಶ್ರೀಮಾತೆಯ ಕಣ್ಣೆದುರಿಗೇ ನನಸು ಮಾಡುವ ತನ್ನ ಇಚ್ಛೆಯನ್ನು ಸುಧೀರಾ ವ್ಯಕ್ತಪಡಿಸಿದಾಗ ಸೋದರಿ ನಿವೇದಿತಾ ಹಾಗೂ ಕ್ರಿಸ್ಟೀನರು ಸಮ್ಮತಿಸಲಿಲ್ಲ. ಆಗಷ್ಟೇ ಸ್ತ್ರೀಶಿಕ್ಷಣದತ್ತ ಕಣ್ಣು ತೆರೆಯುತ್ತಿದ್ದ ಹಿಂದೂ ಸಮಾಜದಲ್ಲಿ ಯಾವುದೇ ರೀತಿಯ ವಿಪರೀತ ಹೆಜ್ಜೆ ಇಡಲು ನಿವೇದಿತಾ ಸಿದ್ಧರಾಗಿರಲಿಲ್ಲ. ಸುಧೀರಾ ಈ ವಿಚಾರವಾಗಿ ತನ್ನ ಗೆಳತಿಯಾದ ಶ್ರೀಅರವಿಂದರ ಪತ್ನಿ ಮೃಣಾಲಿನಿ ದೇವಿಗೆ ಬರೆಯುತ್ತಾರೆ: "ಮದ್ರಾಸಿನಿಂದ ಒಬ್ಬ ಮಹಿಳೆ ಶ್ರೀಮಾತೆಯವರಿಗೆ ಪತ್ರ ಬರೆದು 'ಮಹಿಳೆಯರಿಗಾಗಿ ಒಂದು ಆಶ್ರಮವಿದೆಯೇ?' ಎಂದು ವಿಚಾರಿಸಿದ್ದಾರೆ. ಬಹುಜನರ ಮನಸ್ಸಿನಲ್ಲಿ ಈಗ ಈ ಪ್ರಶ್ನೆ ಏಳಲಾರಂಭಿಸಿದೆ. ಕೆಲವೊಮ್ಮೆ ನನ್ನ ಮನಸ್ಸಿನಲ್ಲಿ ಎಂಥ ತೀವ್ರವಾದ ಭಾವನೆಗಳು ಏಳುತ್ತವೆ ಎಂದರೆ ಈಗಲೇ ಅಂಥ ಒಂದು ಆಶ್ರಮವನ್ನು ಆರಂಭಿಸಿಬಿಡೋಣವೆಂದು. ಕೆಲವೊಮ್ಮೆ ಚಿಂತಿಸುತ್ತೇನೆ, ಶ್ರೀಮಾತೆಯವರಿಂದಲೇ ಈ ಕೆಲಸ ಆರಂಭವಾಗಬೇಕು. ಅವರು ಇದಕ್ಕಾಗಿ ಯಾರನ್ನು ಆರಿಸುತ್ತಾರೆಯೋ ಆಕೆಗೇ ಸಾಧ್ಯ ಈ ಕಷ್ಟದ ಕೆಲಸವನ್ನು ಸಮರ್ಪಕವಾಗಿ ನೆರವೇರಿಸಲು, ಎಂದು."

೧೯೧೦ರಲ್ಲಿ ಶ್ರೀಅರವಿಂದರು ಗೃಹತ್ಯಾಗಮಾಡಿ ಪಾಂಡಿಚೆರಿಗೆ ಹೋದಮೇಲೆ, ಸಮಾಜದಲ್ಲಿ ಜನರ ಪ್ರಶ್ನೆಗಳನ್ನು ಎದುರಿಸುತ್ತಾ ಮನೋವೇದನೆಯಲ್ಲಿ ತೊಳಲುತ್ತಿದ್ದ ಅವರ ಪತ್ನಿ ಮೃಣಾಲಿನಿ ದೇವಿಯನ್ನು ಸುಧೀರಾ ಶ್ರೀಮಾತೆಯವರ ಬಳಿ ಕರೆತಂದರು. ಈ ವಿಚಾರ ತಿಳಿದ ಶ್ರೀಅರವಿಂದರು, "ಮೃಣಾಲಿನಿ ದೇವಿ ಒಂದು ದೊಡ್ಡ ಆಧ್ಯಾತ್ಮಿಕ ಶಕ್ತಿಯ ಆಶ್ರಯವನ್ನು ಪಡೆದಿದ್ದಾರೆ" ಎಂದು ನೆಮ್ಮದಿಯನ್ನು ವ್ಯಕ್ತಪಡಿಸಿದರು.

೧೯೧೦-೧೯೧೧ರಲ್ಲಿ ಮೃಣಾಲಿನಿ ದೇವಿಗೆ ಅನೇಕ ಪತ್ರಗಳನ್ನು ಬರೆದು ಆಕೆಯ ಮನಸ್ಸಿನ ದುಃಖ, ದ್ವಂದ್ವಗಳ ನಿವಾರಣೆಗೆ ಸುಧೀರಾ ಸಹಾಯ ಮಾಡಿದರು. ಸುಧೀರಾ ಮೃಣಾಲಿನಿ ದೇವಿಗೆ ಬರೆದ ಒಂದು ಪತ್ರ : "... ನೀನೀಗ ಕೊಲ್ಕತಕ್ಕೆ ಬಂದಿರುವೆ ಎಂದು ತಿಳಿಯಿತು. ಶ್ರೀಮಾತೆಯವರ ಬಳಿ ಆಗಾಗ ಹೋಗುವುದನ್ನು ಮರೆಯಬೇಡ... ನಿನ್ನ ಮನಸ್ಸಿನಲ್ಲಿ ಇರುವುದನ್ನೆಲ್ಲಾ ಅವರ ಬಳಿ ತೋಡಿಕೊ. ನನ್ನ ಜೀವನದಲ್ಲಿ ಅವರು ಹೇಗೆ ಬದಲಾವಣೆಯನ್ನು ತಂದರೆಂಬುದಕ್ಕೆ ಅನೇಕ ಘಟನೆಗಳ ಉದಾಹರಣೆ ಕೊಡಬಲ್ಲೆ. ಅವರು ಅಂತರ್ಯಾಮಿ ಎನ್ನುವುದರ ಅನುಭವ ನನಗೀಗ ಬಂದಿದೆ. ನನ್ನ ಮನಸ್ಸು ಹೊರ ಜಗತ್ತಿನ ಮೋಹಕ್ಕೆ ಸಿಕ್ಕಿ ದಿಕ್ಕುಗೆಟ್ಟು ಅಲೆಯಲಾರಂಭಿಸಿದಾಗ ನನಗಾಗುವ ನೋವಿನ ಜೊತೆಗೇ ನನ್ನ ಅರಿವಿಗೆ ಬರುತ್ತದೆ ಶ್ರೀಮಾತೆಯವರಿಗೂ ಇದರಿಂದ ನಾನು ಕಷ್ಟಕೊಡುತ್ತಿದ್ದೇನೆ, ಎಂದು. **ಸಹೋದರಿ, ಇರುವ ಒಂದೇ ಉಪಾಯ ಈ ಆಸೆಗಳಿಂದ ಮುಕ್ತಗೊಳಿಸುವಂತೆ ಭಗವಂತನನ್ನು ಪ್ರಾರ್ಥಿಸುವುದು... ಹಗಲೂ ರಾತ್ರಿ ಭಗವಂತನ ಸ್ಮರಣೆ ಮಾಡುವ ಶಕ್ತಿ ಹೊಂದಿರುವ ಮನುಷ್ಯನಿಗಿಂತ ಅದೃಷ್ಟವಂತರು ಈ ಜಗತ್ತಿನಲ್ಲಿ ಇನ್ನಾರಿದ್ದಾರೆ? ಆದ್ದರಿಂದ ಅಂಧಳಂತೆ ಶರಣಾಗು....** ಸಾಧು ಸಂತರ ಜೀವನದಲ್ಲಿ ವಿಶ್ವಾಸವಿಡು. ದೇವರು ನಿನಗೆ ಸಹಾಯಕನಾಗುತ್ತಾನೆ."

ಮೃಣಾಲಿನಿ ದೇವಿಗೆ ಪ್ರೋತ್ಸಾಹ ನೀಡಲು ಸುಧೀರಾ ತಮ್ಮ ಆಧ್ಯಾತ್ಮಿಕ ಅನುಭಗಳ ಬಗ್ಗೆಯೂ ಅವರಿಗೆ ಬರೆಯುತ್ತಾರೆ: ".... ಒಂದು ವರ್ಷದ ತೀವ್ರ ಮಾನಸಿಕ ಯಾತನೆ, ಹೋರಾಟಗಳ ಅನಂತರ ಈಗ ನನ್ನ ಮನಸ್ಸು ಮಧುಮಯವಾಗಿದೆ. ಆದರೆ ಇದೇ ಸಾಧನೆಯ ಕೊನೆಯಲ್ಲ..."

ಶ್ರೀಮಾತೆಯವರು ಅರ್ಹತೆಯುಳ್ಳ ಕೆಲವರಿಗೆ ಆಧ್ಯಾತ್ಮಿಕ ಜೀವನವನ್ನು ಕುರಿತು ಅನೇಕ ಸಲಹೆಗಳನ್ನು ಕೊಡುತ್ತಿದ್ದರು. ಅಂತಹ ಭಾಗ್ಯಶಾಲಿಗಳಲ್ಲಿ ಒಬ್ಬರು ಸುಧೀರಾ ದೇವಿ. ಸುಧೀರಾರಿಗೆ ಆಶ್ವಾಸನೆ ಕೊಡುತ್ತ ಒಮ್ಮೆ ಅವರು ಹೇಳಿದರು : ".... ಭಗವಂತನನ್ನು ಕರೆಯುತ್ತ, ಕರೆಯುತ್ತ ಹೋದಂತೆ ಆತನ ಕೃಪೆಯಿಂದ ಪ್ರೇಮಭಕ್ತಿಯ ಉದಯವಾಗುತ್ತದೆ. ವ್ರಜಗೋಪಿಯರದ್ದು ಈ ಭಾವ. ಶ್ರೀಕೃಷ್ಣನನ್ನು ಬಿಟ್ಟು ಇನ್ನೇತರ ಚಿಂತೆಯೂ ಅವರಿಗೆ ಇರಲಿಲ್ಲ. ಈ ಭಗವದ್ಭಕ್ತಿಯ ಐಶ್ವರ್ಯವನ್ನು ಮನಸ್ಸಿನಲ್ಲಿ ರಹಸ್ಯವಾಗಿ ಪೋಷಿಸಬೇಕು." ಹೀಗೆ ಹೇಳಿ ಶ್ರೀರಾಮಕೃಷ್ಣರ ಬಳಿ ಕೇಳಿದ್ದ ಗಾಯಕ ನೀಲಕಂಠನ ಹಾಡೊಂದನ್ನು ಅತ್ಯಂತ ಮಧುರವಾಗಿ ಹೇಳಿ ಸುಧೀರಾರನ್ನು ಮುಗ್ಧಗೊಳಿಸಿದರು. ಮತ್ತೊಮ್ಮೆ ದೇವರ ನೈವೇದ್ಯಕ್ಕೆ ಮುತ್ತಿದ್ದ ಇರುವೆ ಹಾಗೂ ಈ ವಿಶ್ವಬ್ರಹ್ಮಾಂಡದ ಹಿಂದಿರುವ ವಿರಾಟ್ ಚೈತನ್ಯಗಳ ನಡುವೆ ಏಕಾತ್ಮಭಾವವನ್ನು ಅನುಭವಿಸುವ ತಮ್ಮ ಅದ್ವೈತಾನುಭವವನ್ನು ಆಕೆಯ ಎದುರು ಬಿಚ್ಚಿ ಹೇಳಿದ್ದರು.

ಸೋದರಿ ನಿವೇದಿತಾ ಶಿಸ್ತಿನ ಪ್ರತಿಮೂರ್ತಿಯಾಗಿದ್ದರು. ವಿದ್ಯಾರ್ಥಿನಿಯರು ಪುಸ್ತಕ, ಬಳಪ, ಸೂಜಿ, ದಾರ ಯಾವುದೊಂದನ್ನೂ ಸ್ವಲ್ಪವೂ ವ್ಯರ್ಥವಾಗದಂತೆ ಉಪಯೋಗಿಸು

ತ್ತಾರೆಯೇ ಇಲ್ಲವೇ ಎಂದು ತೀಕ್ಷ್ಣ ದೃಷ್ಟಿಯಿಂದ ಗಮನಿಸು ತ್ತಿದ್ದರು. ಸುಧೀರಾ ಮೊದಮೊದಲು ಇದು ಜಿಪುಣತನದ ಪರಾಕಾಷ್ಠೆ ಎಂದು ಭಾವಿಸಿದ್ದರು. ಈ ವಿಚಾರವಾಗಿ ಆಕೆ ಕ್ರಿಸ್ಟೀನರಿಗೆ ಒಮ್ಮೆ ಹೇಳಿದರು: "ನಾವು ಸಂನ್ಯಾಸಿನಿಯರು. ಈ ರೀತಿ ಸಣ್ಣಪುಟ್ಟ ವಸ್ತುಗಳಲ್ಲೂ ಬಿಗಿಯಾಗಿರುವ ಬುದ್ಧಿ ನಮಗೇಕೆ ಬೇಕು?" ಈ ಮಾತು ನಿವೇದಿತಾರ ಕಿವಿಗೆ ತಲುಪಿದ ಕೂಡಲೇ ಆಕೆ ಸುಧೀರಾ ಹಾಗೂ ಕ್ರಿಸ್ಟೀನ್ ಇಬ್ಬರನ್ನೂ ತರಾಟೆಗೆ ತೆಗೆದುಕೊಂಡರು: "ಕ್ರಿಸ್ಟೀನ್, ಇಂತಹ ಮಾತುಗಳನ್ನು ಸುಧೀರಾಳಿಗೆ ಎಂದೂ ಹೇಳಲು ಬಿಡಬೇಡ. ನಮ್ಮ ಪ್ರತಿಯೊಂದು ಕೆಲಸವೂ ಭಗವಂತನ ಪೂಜೆಯೇ..." ವಸ್ತುಗಳನ್ನು ಬಳಸುವ ವಿಷಯದಲ್ಲಿ ನಿವೇದಿತಾ ಹಾಗೂ ಸುಧೀರಾ ಅವರ ವೈಯಕ್ತಿಕ ನಿಲುವುಗಳೇನೇ ಇರಲಿ, ಇಲ್ಲಿ ಗಮನಿಸಬೇಕಾದ ಎದ್ದು ಕಾಣುವ ಅಂಶವೆಂದರೆ, ಸುಧೀರಾ ತನ್ನನ್ನು ತಾನು 'ಸಂನ್ಯಾಸಿನಿ' ಎಂದು ಗುರುತಿಸಿಕೊಂಡದ್ದು.

ನಿವೇದಿತಾರ ಕೆಲಸದ ಪರಿಧಿ ಇನ್ನೂ ವಿಶಾಲವಾಯಿತು. ಶಾಲೆಯ ಹಣದ ಅಭಾವವನ್ನು ನಿವಾರಿಸಲು ಅವರು ತಾವು ಬರೆದ ಪುಸ್ತಕಗಳನ್ನು ಮಾರಿ ಬಂದ ಹಣವನ್ನು ಶಾಲೆಯ ಕೆಲಸಗಳಿಗೆ ಉಪಯೋಗಿಸಲಾರಂಭಿಸಿದರು. ಸಾಹಿತ್ಯರಚನೆ, ಭಾಷಣ ಹಾಗೂ ಕಡೆಗೆ ಭಾರತದ ಸ್ವಾತಂತ್ರ್ಯ ಹೋರಾಟದ ಸೆಳೆತಕ್ಕೆ ಸಿಕ್ಕ ನಿವೇದಿತಾರಿಗೆ ಶಾಲೆಯ ಕೆಲಸಗಳತ್ತ ಮೊದಲಿನಂತೆ ತಮ್ಮ ಪೂರ್ತಿ ಗಮನವನ್ನು ಕೊಡುವುದು ಅಸಾಧ್ಯವಾಯಿತು. ಇದರಿಂದ ಶಾಲೆಯ ಕೆಲಸದ ಭಾರ ಸಂಪೂರ್ಣವಾಗಿ ಕ್ರಿಸ್ಟೀನ್ ಹಾಗೂ ಸುಧೀರಾರ ಮೇಲೆ ಬಿದ್ದಿತು. ೧೯೧೦ ನವೆಂಬರ್‌ನಲ್ಲಿ ನಿವೇದಿತಾ ವಿದೇಶಕ್ಕೆ ಹೋಗಿ ೧೯೧೧ರಲ್ಲಿ ಮರಳಿದಾಗ ಕ್ರಿಸ್ಟೀನ್ ಹಾಗೂ ಸುಧೀರಾರ ಕಾರ್ಯದಕ್ಷತೆಯಲ್ಲಿ ಶಾಲೆಯ ಉನ್ನತಿಯಾಗಿರುವುದು ಅವರ ಗಮನಕ್ಕೆ ಬಂದಿತ್ತು. ಈ ಮೊದಲೆ ನಿವೇದಿತಾ ಮ್ಯಾಕ್‌ಲೌಡಳಿಗೆ ಬರೆದ ಪತ್ರದಲ್ಲಿ "ನನಗಿಂತ ಕ್ರಿಸ್ಟೀನಳೇ ಸ್ವಾಮೀಜಿಯ ಕೆಲಸವನ್ನು ಚೆನ್ನಾಗಿ ನಡೆಸಿಕೊಂಡು ಹೋಗುತ್ತಿದ್ದಾಳೆ" ಎಂದು ಮುಕ್ತ ಮನದಿಂದ ಪ್ರಶಂಸಿಸಿದ್ದರು.

ನಿವೇದಿತಾ ಶಾಲೆಯ ಕಾರ್ಯಕಲಾಪಗಳಿಂದ ದೂರವಾಗುತ್ತಿದ್ದರೂ ಭಾರತೀಯ ಮಹಿಳೆಯರಿಗಾಗಿ ಕೆಲಸ ಮಾಡಲು ಸ್ವಾಮಿ ವಿವೇಕಾನಂದರು ಕೊಟ್ಟ ಕರೆಯನ್ನು ಆಕೆ ಮರೆಯುವಂತಿರಲಿಲ್ಲ. ಹೀಗಾಗಿ ಶಾಲೆ ಆಕೆಯ ಹೃದಯದ ಪ್ರಧಾನಸ್ಥಾನವನ್ನು ಆಕ್ರಮಿಸಿಕೊಂಡಿತ್ತು. ಶಾಲೆಯ ಮೇಲಿನ ತನ್ನ ಕರ್ತವ್ಯಪ್ರಜ್ಞೆಯನ್ನು ಮನಸ್ಸಿನಿಂದ ಅಳಿಸಿಹಾಕಲು ಅವರಿಗೆ ಸಾಧ್ಯವಾಗಲಿಲ್ಲ. ಅಲ್ಲದೆ ನಿವೇದಿತಾರ ಸ್ವಭಾವ ಹೇಗಿತ್ತೆಂದರೆ, "ಒಮ್ಮೊಮ್ಮೆ ಆಕೆ ಜಗತ್ತಿಗೆ ಶಿಕ್ಷಣ ನೀಡುವ ಆಚಾರ್ಯನ ಸ್ಥಾನದಲ್ಲಿ ನಿಲ್ಲುತ್ತಿದ್ದಳು. ಕೆಲವೊಮ್ಮೆ ತಾಯಿಯಂತೆ ದೀನದುಃಖಿಗಳ ಸೇವೆಯಲ್ಲಿ ಮಗ್ನಳಾಗುತ್ತಿದ್ದಳು, ಮತ್ತೊಮ್ಮೆ ಅವಳ ವ್ಯಕ್ತಿತ್ವದಲ್ಲಿ ಮಾಯೆ ಮಮತೆಗಳಿಂದ ಶೂನ್ಯವಾದ ನಿಷ್ಠುರ ಕರ್ಮನಿಷ್ಠೆ ಎದ್ದು ಕಾಣುತ್ತಿತ್ತು" (ಭಗಿನಿ ನಿವೇದಿತಾ ಎಂಬ ಪುಸ್ತಕದಲ್ಲಿ ಪ್ರವ್ರಾಜಿಕಾ ಮುಕ್ತಿಪ್ರಾಣಾ). ಕರ್ಮಕ್ಷೇತ್ರದಲ್ಲಿ ನಿವೇದಿತಾರ ಈ ಕಠೋರ ಸ್ವಭಾವದಿಂದಲೇ ಇರಬೇಕು, ಕ್ರಿಸ್ಟೀನ್ ಹಾಗೂ ಸುಧೀರಾ ಇಬ್ಬರೂ ಅವರಿಂದ ದೂರ ಸರಿದರು. ಶಾಲೆಯನ್ನು ನಡೆಸುವ ವಿಷಯದಲ್ಲಿ ಕ್ರಿಸ್ಟೀನ್ ಹಾಗೂ ನಿವೇದಿತಾರ ನಡುವೆ ಮತಭೇದ ಉಂಟಾಗಿ ೧೩.೦೪.೧೯೧೧ರಲ್ಲಿ ಕ್ರಿಸ್ಟೀನ್, ಶಾಲೆಯಲ್ಲಿ ತಮಗೆ ಕೆಲಸ ಮಾಡಲು ಇನ್ನು ಸಾಧ್ಯವಿಲ್ಲವೆಂದು ಮಾಯಾವತಿಗೆ ಹೊರಟುಹೋದರು. ಸುಧೀರಾರೂ ಶಾಲೆಗೆ ಹೋಗುವುದನ್ನು ನಿಲ್ಲಿಸಿದರು. ನಿವೇದಿತಾ ಅಕ್ಟೋಬರ್‌ನಲ್ಲಿ ತಮ್ಮ ಆರೋಗ್ಯ ಸುಧಾರಣೆಗೆಂದು ಡಾರ್ಜಿಲಿಂಗ್‌ಗೆ ಹೋಗುವ ಮೊದಲು ಸುಧೀರಾರ ಮನೆಗೆ ಹೋಗಿ ಆಕೆ ಮತ್ತೆ ಶಾಲೆಯಲ್ಲಿ ಕೆಲಸ ಮುಂದುವರಿಸುವಂತೆ ಬೇಡಿಕೊಂಡರು.

ಡಾರ್ಜಿಲಿಂಗ್‌ನಿಂದ ನಿವೇದಿತಾ ಹಿಂತಿರುಗಲಿಲ್ಲ. ತನ್ನ ಪುಸ್ತಕಗಳನ್ನು ಮಾರಿ ಬಂದ ಎಲ್ಲ ಹಣವನ್ನೂ ಮಹಿಳೆಯರ ವಿದ್ಯಾಭ್ಯಾಸಕ್ಕಾಗಿ ಉಪಯೋಗಿಸಲು ಕ್ರಿಸ್ಟೀನರಿಗೆ ಕೊಡಬೇಕೆಂದು ಆಕೆ ತನ್ನ ಉಯಿಲಿನಲ್ಲಿ ಬರೆದಿಟ್ಟಿದ್ದರು. ನಿವೇದಿತಾರ ಅಕಾಲ ಮೃತ್ಯುವಿನ ಸುದ್ದಿ ಸಿಡಿಲಿನಂತೆ ಬಡಿಯಿತು ಕ್ರಿಸ್ಟೀನ್ ಮತ್ತು ಸುಧೀರಾರಿಗೆ. ಇಬ್ಬರೂ ಕೂಡಲೇ ಶಾಲೆಗೆ ಮರಳಿದರು. ನಿವೇದಿತಾ ಸ್ಕೂಲಿನ ವಿದ್ಯಾರ್ಥಿನಿಯೊಬ್ಬಳು ತನ್ನ ಸ್ಮೃತಿಕಥೆಯಲ್ಲಿ ಬರೆಯುತ್ತಾಳೆ: "ಸೋದರಿ ನಿವೇದಿತಾರ ಶರೀರ ತ್ಯಾಗದ ಸುದ್ದಿ ಕೇಳಿ ಸುಧೀರಾ ದೀ ಕಾಯಿಲೆಯಿಂದ ಹಾಸಿಗೆ ಹಿಡಿದರು. ಶ್ರೀಮಾತೆಯವರು, ಸುಧೀರಾ ದೀಯ ಚಿಂತೆಯಲ್ಲಿ ಮುಳುಗಿದರು. ನನ್ನನ್ನು ಕಂಡೊಡನೆ ಅವರ ಕಣ್ಣಿನಲ್ಲಿ ನೀರು ಬಂದಿತು. 'ಸುಧೀರಾ ಹೇಗಿದ್ದಾಳೆ? ಅವಳು ಮಾಡಬೇಕಾದ ಕೆಲಸಗಳು ಇನ್ನೂ ಬೇಕಾದಷ್ಟಿವೆ' ಎಂದು ಹೇಳಿ, ಅನಂತರ ಅಲ್ಲೇ ಇದ್ದ ಭಕ್ತೆಯೊಬ್ಬಳಿಗೆ 'ನೀನೊಮ್ಮೆ ಸುಧೀರಾಳನ್ನು ನೋಡಿ ಬಾ' ಎಂದರು. ಸುಧೀರಾ ಆರೋಗ್ಯವಂತರಾದ ಮೇಲೆ ಕ್ರಿಸ್ಟೀನ್, ಸುಧೀರಾ ದೀ ಹಾಗೂ ನಾನು ಶ್ರೀಮಾತೆಯವರನ್ನು ಕಾಣಲು ಹೋದೆವು. ಅವರು ಸುಧೀರಾ ದೀಯನ್ನು ಕಂಡು ಉದ್ವೇಗದಿಂದ ಹೇಳಲಾರಂಭಿಸಿದರು. 'ನಿನ್ನದೇ ಯೋಚನೆಯಾಗಿತ್ತು... ನಿವೇದಿತಾ ಹೋದಳು, ಜೊತೆಯಲ್ಲಿ ನೀನೂ ಕಾಯಿಲೆಯಿಂದ ಹಾಸಿಗೆ ಹಿಡಿದೆ. ಈಗ ಸುಧೀರಾಗೆ ಏನಾದರೂ ಆದರೆ ಸ್ಕೂಲಿನ ಗತಿ ಏನ ಎಂದು ಚಿಂತೆಯಾಗಿತ್ತು."

೧೯೧೪ರಲ್ಲಿ ಕ್ರಿಸ್ಟೀನ್ ಅಮೆರಿಕಾಕ್ಕೆ ಹೋದರು. ಮೊದಲ ವಿಶ್ವಯುದ್ಧ ಆರಂಭವಾದದ್ದರಿಂದ ೧೯೨೪ರವರೆಗೆ ಅವರು ಅಮೆರಿಕದಲ್ಲಿಯೇ ಇರಬೇಕಾಯಿತು. ಭಾರತಕ್ಕೆ ಕೂಡಲೆ ಹಿಂತಿರುಗುವುದು ಅಸಾಧ್ಯವೆಂದು ಅರಿತ ಮೇಲೆ ಅವರು ಕೂಡಲೆ ಸುಧೀರಾರಿಗೆ ಪತ್ರವನ್ನು ಬರೆದು, ಶಾಲೆಯ ಪ್ರಧಾನ ಶಿಕ್ಷಕಿಯಾಗಿ ಕೆಲಸ ನಿರ್ವಹಿಸುವಂತೆ ಆಕೆಯನ್ನು ಕೇಳಿಕೊಂಡರು. ಸ್ವಾಮಿ ವಿವೇಕಾನಂದರ ಕಲ್ಪನೆಯಾದ ಮಹಿಳೆಯರ ಸಂನ್ಯಾಸಾಶ್ರಮ ನಿರ್ಮಾಣದ ವಾಸ್ತವ ರೂಪಾಂತರದ ಸೂಚನೆಯಂತಿದೆ ಈ ಪತ್ರ. ಕ್ರಿಸ್ಟೀನ್ ಸುಧೀರಾರಿಗೆ ಬರೆಯುತ್ತಾರೆ: "....ಇದು ನಿಮ್ಮ ಕೆಲಸ. ಇದರಲ್ಲಿ ನಿಮಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ನಾನಿದನ್ನು ಅಕ್ಷರಶಃ ಹೇಳುತ್ತಿದ್ದೇನೆ. ಪ್ರಾಚ್ಯ ಮತ್ತು ಪಾಶ್ಚಾತ್ಯದ ಅತ್ಯಂತ

ಶ್ರೇಷ್ಠವಾದ ಹಾಗೂ ಆದರ್ಶಪ್ರಾಯವಾದ ಎಲ್ಲವನ್ನು ಮೈಗೂಡಿಸಿಕೊಂಡಿರುವ, ಅಸಾಧಾರಣ ಬುದ್ಧಿಮತ್ತೆಯ ಹಾಗೂ ಆಧ್ಯಾತ್ಮಿಕ ವರ್ಚಸ್ಸಿನ ಕೆಲವರಾದರೂ ನಾರೀಮಣಿಯರನ್ನು ನಾವು ತಯಾರು ಮಾಡಬೇಕು.... ಅಂತಹ ಕೆಲವೇ ಕೆಲವು ನಾರೀಮಣಿಯರಿದ್ದರೂ ಅವರ ಕೈಯಲ್ಲಿ ಭವಿಷ್ಯ ಸುರಕ್ಷಿತವಾಗಿರುತ್ತದೆ. ಅಂತಹವರನ್ನು ತಯಾರುಗೊಳಿಸುವ ತನಕ ನೀವಾಗಲೀ ನಾನಾಗಲೀ ಕಣ್ಣು ಮುಚ್ಚಲು ಸಾಧ್ಯವಿಲ್ಲ" (*Nivedita Vidyalaya, Centenary Souvenir*, p. 81, A Tribute to Sister Christine).

ಸುಧೀರಾ ಈಗ ಸಂಪೂರ್ಣ ಸ್ವತಂತ್ರರಾಗಿ ಶಾಲೆಯ ಕಾರ್ಯಭಾರವನ್ನು ವಹಿಸಿಕೊಂಡರು. ಅವರು ಮಾಡಿದ ಮೊದಲ ಕೆಲಸವೆಂದರೆ ತಮ್ಮ ಅನೇಕ ದಿನಗಳ ಆಕಾಂಕ್ಷೆಯಾದ ಆಶ್ರಮ ವಿಭಾಗವನ್ನು "ಮಾತೃ ಮಂದಿರ" ಎಂಬ ಹೆಸರಿನಲ್ಲಿ ಆರಂಭಿಸಿದ್ದು. ಅವಿವಾಹಿತರಾಗಿ ಉಳಿಯಲಿಚ್ಛಿಸುವ ಸೇವಾವ್ರತಿಗಳಾದ ತರುಣಿಯರು ಹಾಗೂ ದೂರದ ಸ್ಥಳಗಳಿಂದ ಬಂದ ವಿದ್ಯಾರ್ಥಿನಿಯರು ನೆಲೆಸಲು ಇಲ್ಲಿ ಅವಕಾಶ ಮಾಡಿಕೊಡಲಾಯಿತು. ಇದಕ್ಕೆ ಅವರು ಶ್ರೀಮಾತೆ ಹಾಗೂ ಸ್ವಾಮಿ ಶಾರದಾನಂದರ ಪೂರ್ಣ ಬೆಂಬಲ ಹಾಗೂ ಸಹಾಯುವನ್ನು ಪಡೆದರು. ಈ ಪರಿಕಲ್ಪನೆಯು ಶ್ರೀಮಾತೆಯವರ ಮನಸ್ಸಿನಲ್ಲಿ ನಿರ್ದಿಷ್ಟ ರೂಪವನ್ನು ಪಡೆದಿತ್ತು. ಇದಕ್ಕಿಂತ ಮೊದಲೇ ೧೯೦೯ರಲ್ಲಿ ಮದ್ರಾಸಿನಿಂದ ಒಬ್ಬಳು ಭಕ್ತೆ ಬ್ರಹ್ಮಚಾರಿಣಿ ಜೀವನ ನಡೆಸುವ ಕಾತರತೆಯನ್ನು ವ್ಯಕ್ತಪಡಿಸಿದಾಗ, ಸ್ವಾಮಿ ರಾಮಕೃಷ್ಣಾನಂದರು ಈ ವಿಚಾರವಾಗಿ ಶ್ರೀಮಾತೆಯವರಿಗೆ ಒಂದು ಪತ್ರವನ್ನು ಬರೆದಿದ್ದರು. ಇಂಥ ಜೀವನ ನಡೆಸಲು ಅಗತ್ಯವಾದ ಕೆಲವು ಸಲಹೆಗಳನ್ನು ಕೊಟ್ಟು, ಶ್ರೀಮಾತೆ ಈ ಪತ್ರಕ್ಕೆ ಸ್ವಾಮಿ ಶಾರದಾನಂದರಿಂದ ಉತ್ತರವನ್ನು ಬರೆಸಿದ್ದರು: (1) ಆ ಹುಡುಗಿಯಲ್ಲಿ ತ್ಯಾಗ ಜೀವನದ ಬಗ್ಗೆ ಸಂಪೂರ್ಣವಾದ ಒಲವಿರಬೇಕು; (2) ಆಕೆಗೆ ಅಗತ್ಯವಾದ ಶಿಕ್ಷಣ ಹಾಗೂ ಯೋಗ್ಯ ಸಹವಾಸ ಬೇಕು, ಅಲ್ಲದೆ ನೆಲೆಸಲು ಅನುಕೂಲವಾದ ಸ್ಥಳವೂ ಬೇಕು; ಮತ್ತು (3) ಬೇರೆಯವರ ಮೇಲೆ ಅವಲಂಬಿತರಾಗದೆ ಸ್ವಂತ ಕಾಲ ಮೇಲೆ ನಿಂತು ಬದುಕಲು ಸಹಾಯಕವಾಗುವಂಥ ಕೆಲಸವನ್ನು ಕಲಿಸಬೇಕು.

ಶ್ರೀಮಾತೆಯವರ ಮನದಲ್ಲಿ ಎದ್ದ ಈ ವಿಚಾರಗಳು ಕಾರ್ಯರೂಪಕ್ಕೆ ಇಳಿದದ್ದು "ಮಾತೃ ಮಂದಿರ"ದ ನಿರ್ಮಾಣದಲ್ಲಿ. ಶ್ರೀಮಾತೆಯವರು ಕೆಲವು ದಿನ ಇಲ್ಲಿ ನೆಲೆಸುವ ಇಚ್ಛೆಯನ್ನು ಪ್ರಕಟಿಸಿದಾಗ ಸುಧೀರಾ ಪೂರ್ತಿ ಮಾತೃಮಂದಿರವನ್ನೇ ಶ್ರೀಮಾತೆ ಹಾಗೂ ಅವರ ಜೊತೆಯ ಮಹಿಳೆಯರಿಗೆ ಬಿಟ್ಟುಕೊಟ್ಟರು. ಶ್ರೀಮಾತೆ ಒಂದು ತಿಂಗಳಿಗಿಂತ ಹೆಚ್ಚು ಕಾಲ ಇಲ್ಲಿ ನೆಲೆಸಿದರು. ಮದ್ರಾಸಿನ ಇಬ್ಬರು ಯುವತಿಯರು ನಿವೇದಿತಾ ಶಾಲೆಯಲ್ಲಿ ಶಿಕ್ಷಣವನ್ನು ಪಡೆದು ಆಧ್ಯಾತ್ಮಿಕ ಜೀವನವನ್ನು ನಡೆಸುವ ಉದ್ದೇಶದಿಂದ ಮಾತೃಮಂದಿರಕ್ಕೆ ಬಂದು ಸೇರಿದಾಗ ಶ್ರೀಮಾತೆ ಆನಂದಿತರಾಗಿ ಹೇಳಿದರು: "ಆಹಾ, ಎಷ್ಟು ಚೆನ್ನಾಗಿ ಕೆಲಸಗಳನ್ನು ಕಲಿತಿದ್ದಾರೆ! ನಮ್ಮಗಳ ಅವಸ್ಥೆ ನೋಡಿ! ಎಂಟು ವರ್ಷ ಆಗುವಂತಿಲ್ಲ, ಇನ್ನೂ ಮದುವೆ ಏಕೆ ಮಾಡುತ್ತಿಲ್ಲ ಎಂದು ಶುರು ಮಾಡಿಬಿಡುತ್ತಾರೆ...."

ನಿವೇದಿತಾರ ವಿದ್ಯಾರ್ಥಿನಿ ಸರಳಾದೇವಿ ಸಂಸಾರ ಜೀವನಕ್ಕೆ ಹೋಗಲಿಚ್ಛಿಸದೆ ಸುಧೀರಾರ ಬೆಂಬಲದಿಂದ ಮನೆಬಿಟ್ಟು ಬಂದಾಗ, ಸುಧೀರಾ ಸಮಾಜದ ವಿರೋಧವನ್ನು ಎದುರಿಸಬೇಕಾಯಿತು. ಈ ಸುದ್ದಿ ಶ್ರೀಮಾತೆಯ ಕಿವಿಯನ್ನು ತಲುಪಿದಾಗ ಅವರು ಸುಧೀರಾರನ್ನು ಕರೆದು ಕೇಳಿದರು: "ಸುಧೀರಾ, ಚೆನ್ನಾಗಿ ಯೋಚಿಸಿ ಈ ಕೆಲಸ ಮಾಡಿದೆ ತಾನೆ? ಒಬ್ಬಳು ಹುಡುಗಿಯ ಇಡಿಯ ಜೀವನದ ಜವಾಬ್ದಾರಿ ಈಗ ನಿನ್ನ ಕೈಯಲ್ಲಿದೆ." ಸುಧೀರಾ ಕೆಲವು ಕ್ಷಣ ಮೌನವಾಗಿದ್ದು ಉತ್ತರಿಸಿದರು: "ಆಗಿದ್ದು ಆಗಿಹೋಯಿತಮ್ಮ, ಈಗ ಯೋಚಿಸಿ ಏನೂ ಫಲವಿಲ್ಲ." ಕಡೆಯಲ್ಲಿ ಶ್ರೀಮಾತೆ ಸರಳಾದೇವಿಗೆ ತಮ್ಮ ಬಳಿಯೇ ಆಶ್ರಯ ನೀಡಿದರು. ಕಾಶಿಯ ಶ್ರೀರಾಮಕೃಷ್ಣ ಸೇವಾಶ್ರಮದಲ್ಲಿ ೧೯೧೭ರಲ್ಲಿ ಆರಂಭವಾದ ಮಹಿಳೆಯರ ವಿಭಾಗದಲ್ಲಿ ಕೆಲಸ ಮಾಡಲು ಮಹಿಳೆಯರನ್ನು ಕಳುಹಿಸಲು ಸ್ವಾಮಿ ಬ್ರಹ್ಮಾನಂದರು ಸುಧೀರಾರಿಗೆ ತಿಳಿಸಿದಾಗ, ಆಕೆ ತನ್ನ ವಿದ್ಯಾರ್ಥಿನಿಯರನ್ನು ಕೂಡಲೇ ಈ ಕೆಲಸಕ್ಕೆ ಕಳುಹಿಸಿದರು. ಜೊತೆಗೆ, ಸರಳಾದೇವಿಗೆ ನರ್ಸಿಂಗ್ ಕಲಿಸಿದರೆ ಸೇವಾಶ್ರಮದ ಕೆಲಸಕ್ಕೆ ಮತ್ತೂ ಅನುಕೂಲವೆಂದು ಯೋಚಿಸಿ, ಶ್ರೀಮಾತೆಯವರ ಅನುಮತಿ ಪಡೆದು ಅವರನ್ನು ಲೇಡಿ ಡಾರ್ಫಿನ್ ಆಸ್ಪತ್ರೆಗೆ ಸೇರಿಸಿದರು. ಇದನ್ನು ಸಂಪ್ರದಾಯವಂತ ಮಹಿಳೆಯರು ಪ್ರತಿಭಟಿಸಿದಾಗ ಶ್ರೀಮಾತೆಯವರು ಅವರುಗಳನ್ನು ಶಾಂತಗೊಳಿಸಿದರು.

೧೯೧೮ರಲ್ಲಿ ನಿವೇದಿತಾ ಶಾಲೆ ರಾಮಕೃಷ್ಣ ಮಿಷನ್ನಿನ ಅಧೀನವಾಗಿ "ರಾಮಕೃಷ್ಣ ಮಿಷನ್ ಸಿಸ್ಟರ್ ನಿವೇದಿತಾ ಗರ್ಲ್ಸ್ ಸ್ಕೂಲ್" ಎಂದು ಹೆಸರಾಯಿತು. ಇದುವರೆಗೂ ಅದನ್ನು "ನಿವೇದಿತಾ ಶಾಲೆ", "ವಿವೇಕಾನಂದ ಶಾಲೆ", "ಸಿಸ್ಟರಳ ಶಾಲೆ" ಇತ್ಯಾದಿ ಕರೆಯಲಾಗುತ್ತಿತ್ತು. ೧೯೧೯ರಲ್ಲಿ ಸುಧೀರಾ ಪೂರ್ವ ಬಂಗಾಳದ ಕುಮಿಲ್ಲಾ ಎಂಬ ಸ್ಥಳದಲ್ಲಿ ನಿವೇದಿತಾ ವಿದ್ಯಾಲಯದ ಶಾಖೆಯನ್ನು ತೆರೆದರು. ಶಾಲೆಯ ಅಭಿವೃದ್ಧಿಗಾಗಿ ಸುಧೀರಾ ಪಡುತ್ತಿದ್ದ ಶ್ರಮವನ್ನು ಕಂಡು ಶಾರದಾನಂದರೇ ಆದಿಯಾಗಿ ಅನೇಕರು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.

ಸುಧೀರಾರ ಜೀವನದ ಆಸೆ ಭರವಸೆಗಳ ಕೇಂದ್ರವಾಗಿದ್ದ ಶ್ರೀಮಾತೆ ಶಾರದಾದೇವಿಯವರು ೧೯೨೦ರಲ್ಲಿ ಉದ್ಬೋಧನದಲ್ಲಿ ಕಾಯಿಲೆಯಿಂದ ಹಾಸಿಗೆ ಹಿಡಿದರು. ಅವರ ಸೇವೆಗಾಗಿ ಸುಧೀರಾ ಸರಳಾದೇವಿಯನ್ನು ಅವರ ಹತ್ತಿರವೇ ಬಿಟ್ಟರು. ಉಳಿದ ವಿದ್ಯಾರ್ಥಿನಿಯರು ಆಗಾಗ ಹೋಗಿ ಸಾಧ್ಯವಾದಷ್ಟೂ ಸಹಾಯ ಮಾಡುತ್ತಿದ್ದರು. ಜುಲೈ ೨೧,೧೯೨೦ ಶ್ರೀಮಾತೆಯವರ ಜೀವನದ ಕೊನೆಯ ದಿನ. ಆ ರಾತ್ರಿ ಸುಧೀರಾ ಹಾಗೂ ಸರಳಾ ಅವರ ಪಾದದ ಬಳಿ ಕುಳಿತು ಕಳೆದರು. ಶ್ರೀಮಾತೆಯವರು ಉಸಿರಾಡಲು ಅತ್ಯಂತ ಕಷ್ಟ ಪಡುತ್ತಿದ್ದರು. ರಾತ್ರಿ ಒಂದು ಗಂಟೆಯ ಮೇಲೆ ಎಲ್ಲ ಶಾಂತವಾಯಿತು. ಮರುದಿನ ಬೇಲೂರು ಮಠದ ಗಂಗೆ

ಯಲ್ಲಿ ಸುಧೀರಾ ಹಾಗೂ ಸರಳಾ ಶ್ರೀಮಾತೆಯವರ ಪುಣ್ಯ ಶರೀರಕ್ಕೆ ಸ್ನಾನ ಮಾಡಿಸಿದರು. ಅಂತ್ಯಕ್ರಿಯೆ ನೆರವೇರುತ್ತಿದ್ದಂತೆ, ಸುಧೀರಾರ ಪ್ರಾಣ ದುಃಖದಿಂದ ಹಿಂಡಿಹೋಗಿತ್ತು.

ಈಗ ಕೊಲ್ಕತಾದಲ್ಲಿರಲು ಅವರ ಮನಸ್ಸು ಒಪ್ಪಲಿಲ್ಲ. ಶಾಲೆಗೆ ದುರ್ಗಾಪೂಜೆಯ ರಜೆ ದೊರೆತ ಕೂಡಲೆ ಸರಳಾದೇವಿ ಹಾಗೂ ಇನ್ನೂ ಕೆಲವು ವಿದ್ಯಾರ್ಥಿನಿಯರೊಂದಿಗೆ ಸುಧೀರಾ ತೀರ್ಥಯಾತ್ರೆಗೆ ಹೊರಟರು. ಹೃಷೀಕೇಶದಲ್ಲಿ ನಿರ್ಜನ ಸ್ಥಳದಲ್ಲಿ ಕೆಲವು ದಿನ ಏಕಾಂತದಲ್ಲಿ ಕಳೆದರು. ಒಂದು ದಿನ ಅಲ್ಲಿ ಇತರ ಸಂನ್ಯಾಸಿಗಳಂತೆ ಹೊರಗೆ ಹೋಗಿ ಭಿಕ್ಷೆಯನ್ನು ಬೇಡಿ ಆಹಾರ ಸ್ವೀಕರಿಸಿದರು. ಪರಿವ್ರಾಜಕ ಸಂನ್ಯಾಸೀ ಜೀವನದ ಕನಸು ಕಾಣುತ್ತಿದ್ದ ಸುಧೀರಾಳ ಮನಸ್ಸು ಈ ಮೂಲಕ ತೃಪ್ತಿಯನ್ನು ಅನುಭವಿಸಿತು. ಅವರು ಹರಿದ್ವಾರದಲ್ಲಿರುವಾಗ ಬಾಗ್‌ಬಜಾರಿನಲ್ಲಿ ಶಾಲೆಗಾಗಿ ಕೊಂಡ ಹೊಸ ಜಮೀನಿನಲ್ಲಿ ಪೂಜ್ಯ ಬ್ರಹ್ಮಾನಂದರು ಪೂಜೆಯನ್ನು ಮಾಡಿ ಕಟ್ಟಡ ಕಟ್ಟುವ ಕೆಲಸದ ಶುಭಾರಂಭ ಮಾಡಿದರೆಂಬ ವಿಚಾರವನ್ನು ತಿಳಿದ ಸುಧೀರಾ ತನ್ನ ಬಳಿಯಿದ್ದ ವಿದ್ಯಾರ್ಥಿನಿಯರಿಗೆ ಹೇಳಿದರು: "ನೀವು ಶಾಲೆಯ ಹೊಸ ಕಟ್ಟಡವನ್ನು ನೋಡುತ್ತೀರಿ, ಆದರೆ ನಾನು ಅದನ್ನು ಕಾಣಲು ಇರುವುದಿಲ್ಲ." ಈ ಮಾತುಗಳನ್ನು ಕೇಳಿ ದುಃಖಿತರಾದ ವಿದ್ಯಾರ್ಥಿನಿಯರು ಆಕ್ಷೇಪಣೆ ಮಾಡಿದಾಗ ಸುಧೀರಾ ಮತ್ತೆ ಶಾಂತವಾಗಿ ಹೇಳಿದರು: "ಇಲ್ಲ, ನನಗೆ ಅದನ್ನು ನೋಡುವ ಭಾಗ್ಯವಿಲ್ಲ."

ಅಲ್ಲಿಂದ ಸುಧೀರಾ ಹಾಗೂ ಇತರರು ಸಂಜೆ ನಾಲ್ಕು ಗಂಟೆಗೆ ರೈಲಿನಲ್ಲಿ ಕಾಶಿಯತ್ತ ಹೊರಟರು. ರೈಲಿನಲ್ಲಿ ಸುಧೀರಾ ಎಲ್ಲರಿಗಿಂತ ಮೊದಲೇ ಆಹಾರವನ್ನು ಕೇಳಿ ಸೇವಿಸಿದ್ದನ್ನು ಕಂಡು ವಿದ್ಯಾರ್ಥಿನಿಯರಿಗೆ ಆಶ್ಚರ್ಯವಾಯಿತು. ರಾತ್ರಿ ಎಂಟು ಗಂಟೆಯ ಹೊತ್ತಿಗೆ ಸುಧೀರಾ ಎದ್ದು ಕೈತೊಳೆಯಲು ಶೌಚಾಲಯದತ್ತ ಹೋದರು. ಅವರು ಅಲ್ಲಿಂದ ಹೊರಬಂದದ್ದೂ ಕಂಡಿತು. ಮರುಕ್ಷಣದಲ್ಲಿಯೇ ಕಣ್ಣನ್ನೇ ನಂಬಲಾರದಂಥ ದುರ್ಘಟನೆ ನಡೆದುಹೋಯಿತು. ಆಗಿನ ಕಾಲದ ರೈಲುಗಳ ಬಾಗಿಲು ಹೊರಗಿನಿಂದ ತೆರೆದುಕೊಳ್ಳುವ ವ್ಯವಸ್ಥೆ ಇತ್ತು. ಬಾಗಿಲಿನ ಹತ್ತಿರದವರೆಗೂ ಬಂದಿದ್ದ ಸುಧೀರಾ ರೈಲಿನ ಕುಲುಕಾಟದಲ್ಲಿ ಆಯತಪ್ಪಿ ಬಾಗಿಲಿನ ಹೊರಗೆ ಬಿದ್ದರು. ಕಾಶಿಯ ಸ್ಟೇಷನ್ ಇನ್ನೂ ಎಂಟು ಮೈಲಿ ದೂರವಿತ್ತು. ರೈಲು ವೇಗವಾಗಿ ಓಡುತ್ತಿತ್ತು. ರೈಲನ್ನು ನಿಲ್ಲಿಸಿ ಸುಧೀರಾ ಕೆಳಗೆ ಬಿದ್ದ ಜಾಗಕ್ಕೆ ಓಡಿ ನೋಡಿದಾಗ ಅವರು ಶಾಂತವಾಗಿ ಮಲಗಿದ್ದಾರೆ ಎನ್ನಿಸುತ್ತಿತ್ತು. ಅಲ್ಲಿಂದ ಅವರನ್ನು ಕಾಶಿಯ ಸೇವಾಶ್ರಮಕ್ಕೆ ಕರೆದುಕೊಂಡು ಹೋಗಲಾಯಿತು. ಸ್ವಾಮಿ ಶಾರದಾನಂದರು ಬರೆಯುತ್ತಾರೆ: "....ಸುಧೀರಾಗೆ ಜ್ಞಾನ ಬರಲಿಲ್ಲ. ಮಧ್ಯಾಹ್ನ ಮೂರುವರೆ ಗಂಟೆಯಲ್ಲಿ ಆಕೆಯ ಮುಖ ಜ್ಯೋತಿರ್ಮಯವಾಯಿತು... ಜಗನ್ಮಾತೆ ತನ್ನ ಈ ಕನ್ಯೆಯ ಜೀವನವ್ರತವನ್ನು ಇಲ್ಲಿಗೆ ಕೊನೆಮಾಡಿ ಆಕೆಯನ್ನು ತನ್ನೊಳಗೆ ಸೆಳೆದುಕೊಂಡಳು. ಯಾವ ದಿವ್ಯಧಾಮದಿಂದ ಶ್ರೀರಾಮಕೃಷ್ಣರು ತಮ್ಮ ಕೆಲಸಕ್ಕೆಂದು ಆಕೆಯನ್ನು ಕಳುಹಿಸಿದ್ದರೋ ಈಗ ಅಲ್ಲಿಗೆ ಹಿಂದಿರುಗಿ ನಿತ್ಯಾನಂದದಲ್ಲಿ ಚಿರವಿಹಾರ ಮಾಡುತ್ತ ಆಕೆ ನೆಲೆಸಲಿ."

ಸುಧೀರಾರ ವಯಸ್ಸು ಆಗ ಕೇವಲ ಮೂವತ್ತಮೂರು ವರ್ಷಗಳು ಮಾತ್ರ. ಸ್ವಾಮಿ ಶಾರದಾನಂದರು "ಎಂಬತ್ತು ವರ್ಷಗಳ ವೃದ್ಧರು ಸಾಧಿಸಲಾರದ್ದನ್ನು ತನ್ನ ಅಲ್ಪಜೀವನದ ಪರಿಧಿಯಲ್ಲಿ ಸುಧೀರಾ ಸಾಧಿಸಿ ತೋರಿಸಿದ್ದಾರೆ" ಎಂದು ಬರೆಯುತ್ತಾರೆ. ಸುಧೀರಾರ ಈ ಅಕಾಲ ಮರಣದಿಂದ ನೊಂದ ಸ್ವಾಮಿ ಶಾರದಾನಂದರು ಮುಂದುವರಿದು ಹೇಳುತ್ತಾರೆ: "ಶ್ರೀಶಾರದಾ ಮಂದಿರದ ಪ್ರತಿಷ್ಠಾತ್ರಿ, ಪ್ರಾಣಸ್ವರೂಪಳಾದ ಸುಧೀರಾ ಆಧ್ಯಾತ್ಮಿಕ ಸಾಧನೆ ಹಾಗೂ ಬ್ರಹ್ಮಚರ್ಯದ ಜೀವನದಿಂದ ವಿಕಸಿತವಾದ ತನ್ನ ಹೃದಯದಲ್ಲಿ ದುಃಖ ಕಷ್ಟಗಳಿಂದ ಜರ್ಜರಿತರಾದ ಅನೇಕ ಮಹಿಳೆಯರಿಗೆ ಆಶ್ರಯವನ್ನಿತ್ತಿದ್ದಳು. ಇದ್ದಕ್ಕಿದ್ದಂತೆ ಆಕೆಯನ್ನು ಬಲವಂತವಾಗಿ ವಿಧಿ ದೂರ ಸೆಳೆದುಕೊಂಡಿದೆ."

ಸುಧೀರಾ ಸ್ಥಾಪಿಸಿದ ಆಶ್ರಮ ವಿಭಾಗ "ಮಾತೃ ಮಂದಿರ"ವನ್ನು ಮುಂದೆ "ಶ್ರೀಶ್ರೀಶಾರದಾಮಂದಿರ" ಎಂದು ಜನ ಕರೆಯತೊಡಗಿದರು. ನಿವೇದಿತಾ, ಕ್ರಿಸ್ಟೀನ್ ಹಾಗೂ ಸುಧೀರಾರ ಜೀವನದಿಂದ ಆಕರ್ಷಿತರಾದ ಕೆಲವು ವಿದ್ಯಾವಂತ ತರುಣಿಯರು ಇಲ್ಲಿ ನೆಲೆಸಲಾರಂಭಿಸಿದರು. ಮುಂದೆ ಇಲ್ಲಿಂದಲೇ ಶ್ರೀಶಾರದಾ ಮಠದ ಆರಂಭ. ಸಮಾಜದ ಸಕಲ ವಿರೋಧಗಳನ್ನು ಎದುರಿಸಿ ಸುಧೀರಾ ಆಶ್ರಯವನ್ನು ನೀಡಿ ಕಡೆಯಲ್ಲಿ ಶ್ರೀಮಾತೆಯವರ ಅಭಯ ಚರಣಗಳಿಗೆ ಸಮರ್ಪಿಸಿದ್ದ ಆಕೆಯ ಪ್ರಿಯ ವಿದ್ಯಾರ್ಥಿನಿ ಸರಳಾದೇವಿ ಮುಂದೆ ಈ ಮಠದ ಪ್ರಥಮ ಅಧ್ಯಕ್ಷೆಯಾದರು. ಅವರೇ ಪ್ರವ್ರಾಜಿಕಾ ಭಾರತೀಪ್ರಾಣಾ. ೪೫ ವರ್ಷಗಳ ಕಾಲ ರಾಮಕೃಷ್ಣ ಮಿಷನ್ನಿನ ಅಧೀನದಲ್ಲಿದ್ದ ಶಾಲೆಯನ್ನು ೯.೮.೧೯೬೩ರಂದು ಶಾರದಾ ಮಠಕ್ಕೆ ಒಪ್ಪಿಸಲಾಯಿತು. ಈಗ ಶಾಲೆಯ ಹೆಸರು "ರಾಮಕೃಷ್ಣ ಶಾರದಾ ಮಿಷನ್ ಸಿಸ್ಟರ್ ನಿವೇದಿತಾ ಗರ್ಲ್ಸ್ ಸ್ಕೂಲ್."

ಈ ಎಲ್ಲವನ್ನೂ ಸುಧೀರಾ ಅವರು ತಮ್ಮ ದಿವ್ಯಚಕ್ಷುಗಳಿಂದ ವೀಕ್ಷಿಸುತ್ತಿದ್ದಾರೆಯೋ ಎನ್ನುವಂತೆ ಸ್ವಾಮಿ ಶಾರದಾನಂದರು ಮತ್ತೂ ಬರೆಯುತ್ತಾರೆ: "... ಹೇ ವ್ರತಧಾರಿಣಿ, ಇಂದು ನಿನ್ನ ವ್ರತ ಸಂಪೂರ್ಣವಾಯಿತು, ಚರಿತ್ರೆ ಧನ್ಯವಾಯಿತು, ನಿನ್ನ ಸರ್ವೋತ್ಕೃಷ್ಟವಾದ ತ್ಯಾಗ ಸಾರ್ಥಕವಾಯಿತು." ❑

**ಸ್ತ್ರೀಯರ ಶಿಕ್ಷಣ**

**"ಭಾರತ ಎಂಬ ಶಬ್ದದ ಅರ್ಥ, ಮತ್ತು ಪ್ರಪಂಚದಲ್ಲಿ ಭಾರತದ ಸ್ಥಾನ ಹಾಗೂ ಇದರೊಂದಿಗೆ ಭಾರತಭೂಮಿಯನ್ನೂ ಭಾರತ ಪ್ರಜೆಗಳನ್ನೂ ಸೇವಿಸುವ ಪ್ರಬಲ ಆಕಾಂಕ್ಷೆ—ಇದೇ ಸ್ತ್ರೀಯರಿಗೆ ಶಿಕ್ಷಣ ವಸ್ತುವಾಗಬೇಕು. ಇದೇ ಶಿಕ್ಷಣದ ಕೇಂದ್ರವಾಗಬೇಕು. ... 'ನಾನು ದೇಶವನ್ನು ಹೇಗೆ ಸೇವಿಸಬಲ್ಲೆ? ಹೇಗೆ ಹೇಗೆ?'—ಇದೇ ಪ್ರತಿಯೊಬ್ಬ ವಿದ್ಯಾವಂತ ಮಹಿಳೆಯ ಹೃದಯರಾಗವಾಗಬೇಕು."**

—ಸೋದರಿ ನಿವೇದಿತಾ

ಪ್ರಾಯೋಜಕರು: Corporation Bank , 13/1, 4-13/2, Temple Road, P.B. No.4, V V Mohalla Mysore - 570 002